# ಧೈರ್ಯವಂತನಿಗೆ ನಾಶವಿಲ್ಲ

ಡಾ.ರೂಪಾ

**ಜೀವನವೆನ್ನುವುದು ಒಂದು ದೊಡ್ಡ ಸವಾಲು. ಅದನ್ನು ಧೈರ್ಯದಿಂದ ಎದುರಿಸುವವನು ಬೆಳೆಯುತ್ತಾನೆ. ಇಂತಹ ಧೈರ್ಯವನ್ನು ಆಶ್ರಯಿಸಲು ಕರೆ ನೀಡುತ್ತಾರೆ ಡಾ.ರೂಪಾ ಅವರು. ಇವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರೂ ವಿಭಾಗದ ಮುಖ್ಯಸ್ಥರೂ ಆಗಿರುವರು.**

'ಧೈರ್ಯವುಳ್ಳವನಿಗೆ ನಾಶವಿಲ್ಲ'—ಎಂಬ ಮಾತು ವಾಲ್ಮೀಕಿ ರಾಮಾಯಣದಲ್ಲಿ ಬರುತ್ತದೆ. ಧೈರ್ಯ ಎಂದರೇನು? ತೋಳ್ಬಲವೇ? ಪರಾಕ್ರಮವೇ? ದಿಟ್ಟತನವೇ? ಸಾಹಸವೇ? ಅಲ್ಲ. 'ಧೈರ್ಯ' ಎಂದರೆ ಈ ಎಲ್ಲದರ ಹಿಂದೆ ಇರುವ ಮನೋದಾರ್ಢ್ಯ.

'ಧೈರ್ಯ' ಎಂಬುದಕ್ಕೆ 'ಧೃತಿ' ಎಂದೂ ಹೇಳುತ್ತಾರೆ. ಇದು 'ಅವಸ್ಥಾನ'ಎಂಬ ಅರ್ಥದಲ್ಲಿರುವ 'ಧೃಜ್' (ಧೃಜ್ ಅವಸ್ಥಾನೇ) ಧಾತುವಿನಿಂದ ಬಂದಿದೆ. 'ದೃಢವಾಗಿರುವುದು', 'ವಿಚಲಿತವಾಗದೆ ಇರುವುದು' ಎಂಬುದು ಇದರ ಅರ್ಥ.

'ಉತ್ಸಾಹ' ಎಂಬುದೂ 'ಧೈರ್ಯ' ಎಂಬ ಅರ್ಥದಲ್ಲಿ ಸಂಸ್ಕೃತದಲ್ಲಿ ಪ್ರಯೋಗಿಸಲ್ಪಟ್ಟಿದೆ. ಇದು 'ಉತ್' ಉಪಸರ್ಗಪೂರ್ವಕವಾದ, 'ಸಹಿಸಿಕೊಳ್ಳುವುದು' ಎಂಬ ಅರ್ಥವನ್ನುಳ್ಳ 'ಷಹ್' (ಷಹ್ ಸಮರ್ಷಣೇ) ಧಾತುವಿನಿಂದ ಬಂದಿದೆ. 'ಸ್ವಸ್ವರೂಪದಿಂದ ಕದಲದೇ ಇರುವುದು', 'ಸಹಿಸಿಕೊಂಡು ವಿಚಲಿತವಾಗದೆ ಇರುವುದು' ಎಂಬುದು 'ಉತ್ಸಾಹ' ಪದದ ಅರ್ಥ. 'ಉತ್ಸಾಹ' ಎಂಬುದಕ್ಕೆ 'ಪ್ರಯತ್ನ' 'ಕಷ್ಟತರವಾದ ಪ್ರಯತ್ನ' 'ದೃಢ ಮನಸ್ಸು' 'ದೀರ್ಘ ಪ್ರಯತ್ನ' ಎಂಬ ಅರ್ಥವೂ ಇದೆ. ಕನ್ನಡದಲ್ಲಿ ಇದಕ್ಕೆ 'ಹುರುಪು' 'ಹುಮ್ಮಸ್ಸು' ಎಂಬ ಅರ್ಥ ಇದೆ.

'ಧೈರ್ಯ' ಎಂಬುದಕ್ಕೆ ಇನ್ನೊಂದು ರೀತಿಯಲ್ಲಿಯೂ ಅರ್ಥವನ್ನು ಹೇಳಬಹುದು. 'ಧೀ' ಎಂದರೆ ಬುದ್ಧಿ, ಜ್ಞಾನ, ವಿವೇಕ, ಇದನ್ನು ಕೊಡುವವನು ಧೀರ. ಧೀರನ ಭಾವ ಧೈರ್ಯ. (**ಧಿಯಂ ರಾತಿ ಇತಿ ಧೀರಃ | ಧೀರಸ್ಯ ಭಾವಃ ಧೈರ್ಯಮ್|**) ಧೀರನ ಲಕ್ಷಣಗಳೇನು ಎಂಬುದನ್ನು ತಿಳಿದರೆ 'ಧೈರ್ಯ' ಎಂದರೇನು ಎಂಬುದು ಸ್ಪಷ್ಟವಾಗುತ್ತದೆ. ಆದಕಾರಣ ಈಗ ಧೀರನ ಲಕ್ಷಣಗಳೇನು ಎಂಬುದನ್ನು ನೋಡೋಣ.

## ವಿವೇಕಬುದ್ಧಿ ಧೀರನ ಲಕ್ಷಣ

**ಧೀರನಾದವನು ವಿವೇಕಿಯಾಗಿರುತ್ತಾನೆ. ವಿವೇಕದಿಂದ ವಿಚಾರ ಮಾಡಿ ಸರಿಯಾದ ಮಾರ್ಗದಲ್ಲಿ ಸರಿಯಾದುದನ್ನು ಪಡೆಯಲು ಕಾರ್ಯದಲ್ಲಿ ತೊಡಗುತ್ತಾನೆ. ಸರಿಯಿಲ್ಲದ್ದನ್ನು ವರ್ಜಿಸುತ್ತಾನೆ. ಕಾರ್ಯಸಾಧನೆಗೆ ಅವನು ನಡೆಯುವ ಮಾರ್ಗವೂ ನ್ಯಾಯ ಮಾರ್ಗವೇ ಆಗಿರುತ್ತದೆ. ತಪ್ಪು ಹಾದಿಯಲ್ಲಿ ಅವನು ಹೋಗುವುದಿಲ್ಲ.** 'ಧೀರನಿಗೆ ಅವನತಿಯೇ ಇಲ್ಲ' ಎನ್ನುತ್ತಾನೆ ಸುಗ್ರೀವ. ಸೀತಾ ತಿವಿಯೋಗದ ದುಃಖದಿಂದ ಕಂಗೆಟ್ಟಿದ್ದ ರಾಮನಿಗೆ ಸುಗ್ರೀವ ಹೇಳುವ ಮಾತಿದು:

ವ್ಯಸನೇ ವಾರ್ಥಕೃಚ್ಛ್ರೇ ವಾ ಭಯೇ ವಾ ಜೀವಿತಾಂತಕೇ |
ವಿಮೃಶನ್ ವೈ ಸ್ವಯಾ ಬುದ್ಧ್ಯಾ ಧೃತಿಮಾನ್ ನಾವಸೀದತಿ ||
(*ವಾಲ್ಮೀಕಿರಾಮಾಯಣ, ಕಿಷ್ಕಿಂಧಾಕಾಂಡ. ೭.೯*)

'ಕಷ್ಟಕಾಲದಲ್ಲಾಗಲಿ, ಆರ್ಥಿಕ ಮುಗ್ಗಟ್ಟಿನಲ್ಲಾಗಲಿ, ಭಯವನ್ನುಂಟುಮಾಡುವ ಸನ್ನಿವೇಶದಲ್ಲಾಗಲಿ, ಪ್ರಾಣಾಂತಕವಾದ ವಿಪತ್ತಿನಲ್ಲಾಗಲಿ ಸ್ವಬುದ್ಧಿಯಿಂದ ವಿಮರ್ಶಿಸುವ (ವಿವೇಕದಿಂದ ವಿಚಾರ ಮಾಡುವ) ಧೈರ್ಯವಂತನಿಗೆ ನಾಶವಿಲ್ಲ.'

ವಿಚಾರ ಮಾಡದೇ ಮುನ್ನುಗ್ಗುವವನು ಧೀರನಲ್ಲ; ಕಾರ್ಯಾಕಾರ್ಯಗಳನ್ನು ಸರಿಯಾಗಿ ವಿಮರ್ಶಿಸಿ ಕಾರ್ಯಸಾಧನೆಯಲ್ಲಿ ತತ್ಪರನಾಗುವವನು ಧೀರ ಎಂಬುದು ಗಮನಿಸಬೇಕಾದ ಅಂಶ.

## ಮನೋದಾರ್ಢ್ಯ

ಕಾರ್ಯಸಿದ್ಧಿಯಾಗುವವರೆಗೂ ಧೀರನು ಪ್ರಯತ್ನವನ್ನು ಬಿಡುವುದಿಲ್ಲ. ಎಷ್ಟೇ ಕಷ್ಟಗಳು ಬಂದರೂ ಎದೆಗುಂದುವುದಿಲ್ಲ. ಎಷ್ಟೇ ವಿಘ್ನಗಳು ಬಂದರೂ ಹತಾಶನಾಗುವುದಿಲ್ಲ. ಕಾಮಕ್ರೋಧ ಲೋಭಗಳಿಗೆ ವಶನಾಗುವುದಿಲ್ಲ. ಗುರಿಯನ್ನು ಮುಟ್ಟುವವರೆಗೆ ಸುಖವನ್ನಾಗಲಿ ದುಃಖವನ್ನಾಗಲಿ ಲೆಕ್ಕಿಸುವುದಿಲ್ಲ. ಈ ವಿಷಯದಲ್ಲಿ ಭರ್ತೃಹರಿ ಹೇಳಿರುವ ಈ ಶ್ಲೋಕಗಳನ್ನು ನೋಡಿ:

ನಿಂದಂತು ನೀತಿನಿಪುಣಾಃ ಯದಿ ವಾ ಸ್ತುವಂತು |
ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಮ್ ||
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ |
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ||
(*ನೀತಿಶತಕ, ೭೧*)

'ನೀತಿನಿಪುಣರಾದವರು ನಿಂದಿಸಲಿ ಅಥವಾ ಸ್ತುತಿಸಲಿ; ಸಂಪತ್ತು ಯಥೇಚ್ಛವಾಗಿ ಬರಲಿ ಅಥವಾ ಹೋಗಲಿ; ಮರಣವು ಇಂದೇ ಬರಲಿ ಅಥವಾ ಇನ್ನೊಂದು ಯುಗದಲ್ಲಿ ಬರಲಿ; (ಏನೇ ಆದರೂ) ಧೀರರು ನ್ಯಾಯಮಾರ್ಗದಿಂದ ಹೆಜ್ಜೆಯನ್ನು ತೆಗೆಯುವುದಿಲ್ಲ.'

ಕ್ವಚಿತ್ ಪೃಥ್ವೀಶಯ್ಯಃ ಕ್ವಚಿದಪಿ ಚ ಪರ್ಯಂಕಶಯನಃ |
ಕ್ವಚಿಚ್ಛಾಕಾಹಾರಃ ಕ್ವಚಿದಪಿ ಚ ಶಾಲ್ಯೋದನರುಚಿಃ |
ಕ್ವಚಿತ್ ಕಂಥಾಧಾರೀ ಕ್ವಚಿದಪಿ ಚ ದಿವ್ಯಾಂಬರಧರಃ |
ಮನಸ್ವೀ ಕಾರ್ಯಾರ್ಥೀ ನ ಗಣಯತಿ
ದುಃಖಂ ನ ಚ ಸುಖಮ್ |

'ಕೆಲವೊಮ್ಮೆ ನೆಲದ ಮೇಲೆ ಮಲಗುತ್ತಾನೆ, ಕೆಲವು ಸಲ ಮಂಚದ ಮೇಲೆ ಮಲಗುತ್ತಾನೆ; ಕೆಲವು ಬಾರಿ ಶಾಕವೇ (ಗಡ್ಡೆ, ಗೆಣಸು, ಹಣ್ಣು, ತರಕಾರಿಗಳೇ) ಅವನಿಗೆ ಆಹಾರ, ಕೆಲವು ಸಲ ಮೃಷ್ಟಾನ್ನ ಭೋಜನವೇ ಆಹಾರ; ಕೆಲವೊಮ್ಮೆ ಹರಕು ಬಟ್ಟೆಯನ್ನು ಧರಿಸುತ್ತಾನೆ, ಕೆಲವು ಬಾರಿ ದಿವ್ಯ ವಸ್ತ್ರವನ್ನು ಧರಿಸುತ್ತಾನೆ. (ಇಂತಹ ಸುಖಕರವಾದ ಅಥವಾ ದುಃಖಕರವಾದ ಸನ್ನಿವೇಶಗಳು ಬಂದರೂ ಅವನು ಸ್ವಲ್ಪವೂ ವಿಕಾರ ಹೊಂದದೇ ಕಾರ್ಯಸಾಧನೆಯನ್ನು ಮುಂದುವರಿಸುತ್ತಾನೆ.) ಕಾರ್ಯಸಾಧನೆಯಲ್ಲಿ ಆಸಕ್ತನಾದ ಧೀರನು ದುಃಖವನ್ನೂ ಸುಖವನ್ನೂ ಲೆಕ್ಕಿಸುವುದಿಲ್ಲ.' (ಸುಖ ಬಂದರೆ ಹಿಗ್ಗದೇ ಕಷ್ಟ ಬಂದರೆ ಕುಗ್ಗದೇ ಕಾರ್ಯಸಿದ್ಧಿಯಾಗುವವರೆಗೆ ಪ್ರಯತ್ನಿಸುತ್ತಲೇ ಇರುತ್ತಾನೆ. ಅವನು ಧೀರ.)

'ಧೈರ್ಯವಂತನಿಗೆ ನಾಶವಿಲ್ಲ' ಎಂದು ಸುಗ್ರೀವ ಹೇಳಿದರೆ, 'ಧೀರನಾದವನು ಮೂರು ಲೋಕಗಳನ್ನೂ ಜಯಿಸುತ್ತಾನೆ' ಲೋಕತ್ರಯಮಿದಂ ಜಯತಿ ಕೃತ್ಸ್ನಮಿದಂ ಸ ಧೀರಃ | ಎನ್ನುತ್ತಾನೆ ಭರ್ತೃಹರಿ.

## ಧೈರ್ಯವೇ ಸದ್ಗುಣಮೂಲ

'ಧೈರ್ಯ' ಎಂಬುದು ಒಂದು ಮಾನಸಿಕ ಸ್ಥಿತಿ; ಎಂತಹ ಪರಿಸ್ಥಿತಿಯಲ್ಲೂ ಎದೆಗುಂದದೇ ಇರುವ ಶಕ್ತಿ; ಎಂತಹ ಸನ್ನಿವೇಶವನ್ನೂ ವಿಚಲಿತನಾಗದೇ ಎದುರಿಸುವ ಶಕ್ತಿ; ಮನೋದಾರ್ಢ್ಯ. ಇದು ಇದ್ದರೆ ಬುದ್ಧಿ ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಬುದ್ಧಿ ಸರಿಯಾಗಿ ಕೆಲಸ ಮಾಡಿದಾಗ ಯುಕ್ತಾಯುಕ್ತಜ್ಞಾನ ಬರಲು ಸಾಧ್ಯ. ಯುಕ್ತಾಯುಕ್ತಜ್ಞಾನ ಬಂದಾಗ ಸರಿಯಾದುದನ್ನು ಮಾಡಲು ಮತ್ತು ಸರಿಯಲ್ಲದ್ದನ್ನು ತ್ಯಜಿಸಲು ಸಾಧ್ಯ ಮತ್ತು ಹಾಗೆ ಮಾಡಲು ಮನಸ್ಸು ನಿಶ್ಚಲವಾಗಿರಬೇಕು; ಕಾರ್ಯಸಾಧನೆಗಾಗಿ ಪ್ರಯತ್ನವೂ ಬೇಕು; ಕಷ್ಟಕೋಟಲೆಗಳು ಬಂದರೂ ಎದೆಗುಂದಿ ಪ್ರಯತ್ನವನ್ನು ಬಿಡದೇ ಕಾರ್ಯವನ್ನು ಸಾಧಿಸಿಯೇ ತೀರುವೆನೆಂಬ ಅಚಲವಾದ ಆತ್ಮವಿಶ್ವಾಸ ಇರಬೇಕು. ಹೀಗೆ ವಿವೇಕ, ಮನೋದಾರ್ಢ್ಯ, ಪ್ರಯತ್ನ, ಸಹಿಷ್ಣುತೆ, ಆತ್ಮವಿಶ್ವಾಸ—ಈ ಎಲ್ಲವೂ 'ಧೈರ್ಯ' ಎಂಬುದರಲ್ಲಿ ಅಡಕವಾಗಿವೆ.

ಮನುಸ್ಮೃತಿಯಲ್ಲಿ ಧೈರ್ಯವನ್ನು ಧರ್ಮದ ಲಕ್ಷಣವಾಗಿ ಪರಿಗಣಿಸಲಾಗಿದೆ:

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ |
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮ ಲಕ್ಷಣಮ್ ||
(ಮ.ಸ್ಮೃ. ೬.೯೨)

'ಧೈರ್ಯ, ಸಹನೆ, ಮನೋನಿಗ್ರಹ, ಕದಿಯದಿರುವುದು, ಶುಚಿತ್ವ, ಇಂದ್ರಿಯನಿಗ್ರಹ, ವಿವೇಕ, ವಿದ್ಯೆ, ಸತ್ಯ, ಕ್ರೋಧವಿಲ್ಲದಿರುವುದು—ಇವು ಧರ್ಮದ ಹತ್ತು ಲಕ್ಷಣಗಳು.'

ಸತ್ಯ ಅಸ್ತೇಯ ಅಕ್ರೋಧ ಇತ್ಯಾದಿಗಳನ್ನು ಪಾಲಿಸಲೂ ಕೂಡ ಧೈರ್ಯ ಅತ್ಯವಶ್ಯ. ಧೈರ್ಯವಿದ್ದಾಗ ಮಾತ್ರ ಇತರ ಎಲ್ಲ ಧರ್ಮಗಳನ್ನೂ ಅಳವಡಿಸಿಕೊಳ್ಳಲು ಸಾಧ್ಯ. ಆದ್ದರಿಂದ ಧೈರ್ಯವು ಇತರ ಎಲ್ಲ ಧರ್ಮಗಳಿಗೂ ಮೂಲಭೂತವಾದುದು, ಆಧಾರವಾದುದು ಎನ್ನಬಹುದು.

## ಯಶಸ್ಸಿನ ಗುಟ್ಟು ಧೈರ್ಯ

ಧೈರ್ಯವು ಕಾರ್ಯಸಿದ್ಧಿಗೆ ಕಾರಣ, ಇದು ಇದ್ದರೆ ಯಾವುದನ್ನು ಬೇಕಾದರೂ ಸಾಧಿಸಬಹುದು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಪ್ರತಿಯೊಂದು ಹಂತದಲ್ಲಿಯೂ, ಅದು ಲೌಕಿಕವೇ ಆಗಿರಲಿ ಧಾರ್ಮಿಕವೇ ಆಗಿರಲಿ ಆಧ್ಯಾತ್ಮಿಕವೇ ಆಗಿರಲಿ, ವಿದ್ಯಾರ್ಥಿದೆಸೆಯೇ ಆಗಿರಲಿ ಉದ್ಯೋಗಕ್ಷೇತ್ರವೇ ಆಗಿರಲಿ ಗೃಹಸ್ಥಜೀವನವೇ ಆಗಿರಲಿ; ಎಲ್ಲೆಡೆಯೂ ಯಶಸ್ಸಿನ ಪ್ರಾಪ್ತಿಗೆ ಅತ್ಯವಶ್ಯವಾಗಿರುವ ಸಾಧನವೆಂದರೆ ಧೈರ್ಯವೇ—ಧೈರ್ಯಂ ಸರ್ವತ್ರ ಸಾಧನಮ್

> 'ಸಮಸ್ಯೆಗಳು ಮತ್ತು ಸವಾಲುಗಳೇ ಮುಂದಿಲ್ಲದ ಕೊನೆಯಲ್ಲ; ಅವು ರಸ್ತೆಯ ತಿರುವುಗಳಿದ್ದಂತೆ. ಸಮಸ್ಯೆಗಳು ಅಡೆತಡೆಗಳಲ್ಲ; ಅವು ಉತ್ತಮ, ಶ್ರೀಮಂತ ಮತ್ತು ಹೆಚ್ಚು ಪ್ರಭಾವಪೂರ್ಣ ಜೀವನಕ್ಕೆ ಮೆಟ್ಟಿಲುಗಳಿರುವಂತೆ. ಎಷ್ಟೋ ವೇಳೆ ಸಮಸ್ಯೆಗಳೆಂಬ ಬಾಗಿಲಿನ ಮೂಲಕ ದೇವರು ನಮ್ಮ ಜೀವನವನ್ನು ಪ್ರವೇಶಿಸುತ್ತಾನೆ. ನಾವು ಕಠಿನವಾದ ಕೋಶಗಳಿಂದ ಆವೃತರಾಗಿದ್ದೇವೆ. ಇವು ದೇವರನ್ನು ನಮ್ಮಿಂದ ದೂರ ಇಟ್ಟಿವೆ. ಸಮಸ್ಯೆಗಳು ಈ ಕೋಶಗಳನ್ನು ಒಡೆಯುತ್ತವೆ ಮತ್ತು ದೇವರು ಸುಲಭವಾಗಿ ನಮ್ಮ ಜೀವನವನ್ನು ಪ್ರವೇಶಿಸುತ್ತಾನೆ.'
> —ಜೆ.ಪಿ. ವಾಸ್ವಾನಿ

ಧೈರ್ಯವಿದ್ದರೆ (ಯಶಸ್ಸಿನ) ಮಾರ್ಗ ತಾನಾಗಿಯೇ ಸ್ಪಷ್ಟವಾಗುತ್ತದೆ. 'ಧೈರ್ಯವಿರುವಲ್ಲಿ ಭಗವಂತನೂ ಸಹಾಯಕನಾಗಿರುತ್ತಾನೆ' ಎಂದು ಹೇಳುವ ಈ ಸುಭಾಷಿತವನ್ನು ನೋಡಿ:

ಉದ್ಯಮಃ ಸಾಹಸಂ ಧೈರ್ಯಂ ಬುದ್ಧಿಃ ಶಕ್ತಿಃ ಪರಾಕ್ರಮಃ |
ಷಡೇತೇ ಯತ್ರ ವರ್ತಂತೇ ತತ್ರ ದೇವಃ ಸಹಾಯಕೃತ್ ||

'ಉದ್ಯಮ, ಸಾಹಸ, ಧೈರ್ಯ, ಬುದ್ಧಿ, ಶಕ್ತಿ, ಪರಾಕ್ರಮ—ಈ ಆರೂ ಎಲ್ಲಿರುತ್ತವೋ ಅಲ್ಲಿ ಭಗವಂತನು ಸಹಾಯ ಮಾಡುವನು.'

## 'ಭಯವೇ ಮೃತ್ಯು'

'ಧೈರ್ಯ'ಕ್ಕೆ ವಿರುದ್ಧವಾದುದು ಹೇಡಿತನ; ಭಯ; ಎದೆಗುಂದುವಿಕೆ; ಗಾಬರಿ;ಯಾವುದನ್ನೂ ಎದುರಿಸಲಾಗದ ನಿಶ್ಶಕ್ತಿ. ಇದು

ನಾಶಕ್ಕೆ ಕಾರಣ. ಹೇಗೆಂದರೆ, ಇದು ಇದ್ದರೆ ಬುದ್ಧಿಯು ಆಲೋಚನೆ ಮಾಡುವ ಶಕ್ತಿಯನ್ನೇ ಕಳೆದುಕೊಳ್ಳುತ್ತದೆ. ಆಗ ಏನನ್ನು ಮಾಡ ಬೇಕೆಂಬುದೇ ಅದಕ್ಕೆ ತೋಚುವುದಿಲ್ಲ. ಆಗ ಮಾಡಬೇಕಾದ್ದನ್ನು ಮಾಡದೇ ಇರುವುದಾಗುತ್ತದೆ, ಅಥವಾ ಮಾಡಬಾರದ್ದನ್ನು ಮಾಡು ವುದಾಗುತ್ತದೆ. ಇದು ನಾಶಕ್ಕೆ ಹಾದಿ ಮಾಡಿಕೊಡುತ್ತದೆ, ನಾಶ ಶೋಕಕ್ಕೆ ಕಾರಣವಾಗುತ್ತದೆ.

ಧೈರ್ಯ ಹೇಗೆ ಕಾರ್ಯಸಾಧನೆಗೆ, ಯಶಸ್ಸಿಗೆ ಕಾರಣವೋ ಹಾಗೆ ಹೇಡಿತನವು ಕಾರ್ಯನಾಶಕ್ಕೆ ಅಪಯಶಸ್ಸಿಗೆ ಕಾರಣ. ಚೆನ್ನಾಗಿ ಅಧ್ಯಯನ ಮಾಡಿದ್ದರೂ ಭಯಪಟ್ಟು ಪರೀಕ್ಷೆಯಲ್ಲಿ ಸರಿಯಾಗಿ ಉತ್ತರಿಸಲಾಗದೆ ಅನುತ್ತೀರ್ಣ ರಾಗಿರುವವರಿಲ್ಲವೇ? ವಿಷಯ ಸರಿಯಾಗಿ ತಿಳಿದಿದ್ದರೂ ಸಂದರ್ಶನ ದಲ್ಲಿ ಗಾಬರಿಯಿಂದಾಗಿ ಸರಿಯಾಗಿ ಉತ್ತರಿಸದೇ ಸರಿಯಾಗಿ ವರ್ತಿಸದೇ ಉದ್ಯೋಗವನ್ನು ಗಳಿಸಿಕೊಳ್ಳು ವುದರಲ್ಲಿ ವಿಫಲರಾಗಿರುವವರಿಲ್ಲವೇ? ವೇದಿಕೆಗೆ ಬಂದಾಗ ತಡವರಿಸಿ ಅಥವಾ ತಪ್ಪಾಗಿ ಹೇಳಿ ಅಥವಾ ಮರೆತೇ ಹೋಗುವವರಿಲ್ಲವೇ? ಆದ್ದರಿಂದ ಭಯವೇ ಅವನತಿಗೆ ಕಾರಣ. ಭಯವೆ ಶೋಕಕ್ಕೆ ಕಾರಣ, ಭಯವೇ ಮೃತ್ಯು. *'It is fear alone that is death'* ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

> 'ನಾನು ಸುಖಕ್ಕೆ ಅಂಟಿಕೊಂಡಷ್ಟೂ ದುಃಖಕ್ಕೆ ಭಯಪಡುತ್ತೇನೆ; ನಾನು ಒಳ್ಳೆಯತನವನ್ನು ಬೆನ್ನಟ್ಟಿ ಹೋದಷ್ಟೂ ಕೆಟ್ಟದ್ದು ನನ್ನನ್ನು ಮೆಟ್ಟಿಕೊಂಡು ಪೀಡಿಸುತ್ತದೆ; ನಾನು ಯಶಸ್ಸನ್ನು ಅರಸಿದಷ್ಟೂ ಸೋಲು ನನ್ನನ್ನು ಹೆದರಿಸುತ್ತದೆ; ಜೀವನಕ್ಕೆ ನಾನು ಹೆಚ್ಚು ಅಂಟಿ ಕೊಂಡಷ್ಟೂ ಸಾವು ನನಗೆ ಭಯಂಕರ ವಾಗುತ್ತದೆ; ನಾನು ಯಾವುದೇ ವಸ್ತುವನ್ನು ಅತಿಯಾಗಿ ಇಷ್ಟಪಟ್ಟಷ್ಟೂ ಅದರ ನಷ್ಟ ನನ್ನನ್ನು ಕಾಡಿಸುತ್ತದೆ.'
>
> —ಕೆನ್ ವಿಲ್ಬರ್ (ಪ್ರಸಿದ್ಧ ಮನಶ್ಶಾಸ್ತ್ರಜ್ಞ)

ಸೀತಾವಿರಹಜನಿತ ಶೋಕದಿಂದ ರಾಮನು ಧೃತಿಗೆಟ್ಟಿದ್ದಾಗ ಸುಗ್ರೀವ ಇದನ್ನೇ ಹೇಳುತ್ತಾನೆ:

**ಬಾಲಿಶಸ್ತು ನರೋ ನಿತ್ಯಂ ವೈಕ್ಲವ್ಯಂ ಯೋಽನುವರ್ತತೇ ।**
**ಸ ಮಜ್ಜತ್ಯವಶಃ ಶೋಕೇ ಭಾರಾಕ್ರಾಂತೇವ ನೌರ್ಜಲೇ ॥**
**ಯೇ ಶೋಕಮನುವರ್ತಂತೇ ನ ತೇಷಾಂ ವಿದ್ಯತೇ ಸುಖಮ್ ।**
**ತೇಜಶ್ಚ ಕ್ಷೀಯತೇ ತೇಷಾಂ ನ ತ್ವಂ ಶೋಚಿತುಮರ್ಹಸಿ ॥**
**ಶೋಕೇನಾಭಿಪ್ರಪನ್ನಸ್ಯ ಜೀವಿತೇ ಚಾಪಿ ಸಂಶಯಃ ।**
**ಸ ಶೋಕಂ ತ್ಯಜ ರಾಜೇಂದ್ರ, ಧೈರ್ಯಮಾಶ್ರಯ ಕೇವಲಮ್ ॥**

(ವಾ.ರಾ. ಕಿ. ಕಾಂ. ೭.೧೦;೧೨;೧೩)

'ಆದರೆ (ಧೈರ್ಯವಿಲ್ಲದೆ) ಯಾವನು ಬಾಲಿಶನಾಗಿ (ವಿವೇಕ ರಹಿತನಾಗಿ)ಎದೆಗುಂದುತ್ತಾನೋ ಅವನು ನಿಸ್ಸಹಾಯಕನಾಗಿ, ಅತಿಯಾದ ಭಾರವನ್ನು ಹೊತ್ತ ದೋಣಿಯು ನೀರಿನಲ್ಲಿ ಮುಳುಗು ವಂತೆ ಶೋಕದಲ್ಲಿ ಮುಳುಗುತ್ತಾನೆ. ಶೋಕಪಡುತ್ತಿರುವವನಿಗೆ ಸುಖವಿಲ್ಲ, ಅಂಥವನ ತೇಜಸ್ಸೂ ಕೂಡ ಕ್ಷೀಣವಾಗುತ್ತದೆ. ಶೋಕ ವಶನಾದವನಿಗೆ ಪ್ರಾಣರಕ್ಷಣೆಯೂ ಕಷ್ಟವಾಗಬಹುದು. ಆದ್ದರಿಂದ, ಎಲೈ, ರಾಜೇಂದ್ರನೇ! ಶೋಕ ವನ್ನು ತ್ಯಜಿಸು. ಕೇವಲ ಧೈರ್ಯ ವನ್ನಾಶ್ರಯಿಸು.'

ಇದರ ತಾತ್ಪರ್ಯವಿಷ್ಟು: ಧೈರ್ಯವಿಲ್ಲದಿದ್ದರೆ ದುಃಖ, ದುಃಖವಿದ್ದರೆ ಸುಖವಿಲ್ಲ, ದುಃಖವಿದ್ದರೆ ತೇಜಸ್ಸೂ ಕ್ರಮೇಣ ಕಡಿಮೆಯಾಗುತ್ತದೆ. ಶೋಕದಲ್ಲಿ ಮುಳುಗಿದವನಿಗೆ ಬುದ್ಧಿಯೂ ನಾಶವಾಗಿ ಜೀವವನ್ನು ಕಾಪಾಡಿ ಕೊಳ್ಳುವುದೂ ಕಷ್ಟವಾಗಬಹುದು. ಆದ್ದರಿಂದ ಕೇವಲ ಧೈರ್ಯ ವನ್ನಾಶ್ರಯಿಸಬೇಕು.

## ಧೀರತೆಯ ದುಂದುಭಿ

'ಭಯವೇ ಎಲ್ಲ ದುಃಖಕ್ಕೂ ಮೂಲ' 'ಭಯವೇ ಮಹಾ ಪರಾಧ' 'ಭಯದಿಂದಲೇ ದುಃಖ, ಭಯದಿಂದಲೇ ಕೆಡುಕು' ಎಂದು ಸ್ವಾಮಿ ವಿವೇಕಾನಂದರೂ ಇದನ್ನೇ ಹೇಳುತ್ತಾರೆ. 'ಧೀರರಾಗಿ' 'ಧೈರ್ಯವಂತರಾಗಿ' 'ಕೆಚ್ಚೆದೆಯವರಾಗಿ, ಯಾವುದಕ್ಕೂ ಹೆದರದಿರಿ' ಎಂದು ಧೈರ್ಯವನ್ನಾಶ್ರಯಿಸಲು ಅವರು ಕರೆನೀಡುತ್ತಾರೆ. ಆದ್ದರಿಂದ ನಾವು ಶೋಕಕ್ಕೆ, ಅವನತಿಗೆ, ಅಪಯಶಸ್ಸಿಗೆ ಕಾರಣವಾದ ಭಯವನ್ನು ತ್ಯಜಿಸಿ ನಮ್ಮ ಜೀವನದ ಗುರಿಯನ್ನು ಸಾಧಿಸಲು ಧೈರ್ಯವನ್ನೇ ಆಶ್ರಯಿಸೋಣ.

---

**ಸರ್ವಂ ವಸ್ತು ಭಯಾನ್ವಿತಂ ಭುವಿ ನೃಣಾಂ**
**ವೈರಾಗ್ಯಮೇವಾಭಯಮ್ ॥**

**'ಈ ಭೂಮಿಯಲ್ಲಿ ಮನುಷ್ಯನಿಗೆ ಎಲ್ಲ ವಸ್ತುಗಳೂ ಭಯಾನ್ವಿತವಾಗಿವೆ, ವೈರಾಗ್ಯವೊಂದೇ ಅಭಯ'**

—ಭರ್ತೃಹರಿ